ಇ) ಈ ರಸ್ತೆಗಳ ಸುಧಾರಣೆಗೆ ತಗಲಿದ ವೆಚ್ಚವೆಷ್ಟು? (ಜಿಲ್ಲಾವಾರು ಕಿ. ಮೀ ವಾರು ವಿವರ ನೀಡುವುದು)

ಈ) ಈ ರಸ್ತೆಗಳ ಸುಧಾರಣೆಗೆ ೧೯೯೨-೯೩ನೇ ಸಾಲಿಗೆ ಕಾಯ್ದಿರಿಸಿದ ಹಣವೆಷ್ಟು? (ಜಿಲ್ಲಾವಾರು, ಕಿ. ಮೀ. ವಾರು ವಿವರ ನೀಡುವುದು)

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಯಾವುದೂ ಇಲ್ಲ. ಆದರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ. ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ ೧೮-೨-೧೯೯೨ ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪಟ್ಟಿಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರಿಗೆ ಪ್ರಸ್ತಾಪಿಸಲಾದ ವಿಷಯ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ವಿಷಮ ಜ್ವರ

ಶ್ರೀ ಹೆಚ್. ವಿಶ್ವನಾಥ್ (ಕೆ. ಆರ್. ನಗರ):- ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ಯಾವುದೋ ಒಂದು ವಿಧವಾದ ಜ್ವರ ಪ್ರಾರಂಭವಾಗಿ ಬಹಳ ಆತಂಕವಾದ ಪರಿಸ್ಥಿತಿ ಉಂಟಾಗಿದೆ. ನೂರಾರು ಮಕ್ಕಳು ಇವತ್ತು ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಆಸ್ಪತ್ರೆಯಲ್ಲಿರಲು ಜಾಗವಿಲ್ಲ ಮತ್ತು ಸರಿಯಾದ ರೀತಿಯಲ್ಲಿ ಚಿಕಿತ್ಸೆಯ ವ್ಯವಸ್ಥೆ ಇಲ್ಲದೆ ಮಕ್ಕಳ ಪೋಷಕರು ಅವರ ಮಕ್ಕಳನ್ನು ಮೈಸೂರು ಜಿಲ್ಲೆಯ ಆಸ್ಪತ್ರೆಗಳಿಗೆ ತೆಗೆದುಕೊಂಡು ಬಂದು ಚಿಕಿತ್ಸೆಯನ್ನು ಕೊಡಿಸುತ್ತಿದ್ದಾರೆ. ಇದರ ಬಗ್ಗೆ ಅಲ್ಲಿರತಕ್ಕ ಜಿಲ್ಲಾ ಆರೋಗ್ಯಾಧಿಕಾರಿಗಳು ಬಹಳ ಉದಾಸೀನರಾಗಿದ್ದಾರೆ. ಅದು ಯಾವ ಘಟ್ಟಕ್ಕೆ ಹೋಗಿದೆ ಎಂದರೆ ಬೇರೆ ಬೇರೆ ಕಡೆಗೆ ತಂದೆ ತಾಯಿಗಳು ಮಕ್ಕಳನ್ನು ಹೊತ್ತುಕೊಂಡು ಮೈಸೂರು ನಗರದಲ್ಲಿ ತಿರುಗಾಡುತ್ತಿದ್ದಾರೆ. ಆದುದರಿಂದ ತಕ್ಷಣ ಮಾನ್ಯ ಆರೋಗ್ಯ ಸಚಿವರು ಗುಂಡ್ಲುಪೇಟೆಗೆ ಧಾವಿಸಿ ಅಲ್ಲಿ ಸರಿಯಾದ ಚಿಕಿತ್ಸೆಗೆ ವ್ಯವಸ್ಥೆಯನ್ನು ಮಾಡಿ ಸಾವು ನೋವಿನ ತೂಗುಯ್ಯಾಲೆಯಲ್ಲಿರುವ ಮಕ್ಕಳ ಜೀವವನ್ನು ಬದುಕಿಸಲು ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಪ್ರಸ್ತಾಪ ಮಾಡುತ್ತಿದ್ದೇನೆ.

ನಿಯಮ ೬೩ರ ಕೆಳಗೆ ಚರ್ಚೆ

ದಾವಣಗೆರೆ ನಗರ ಸಭೆಗೆ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯ

ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):- ಸನ್ಮಾನ್ಯ ಅಧ್ಯಕ್ಷರೇ, ದಾವಣಗೆರೆ ನಗರ ಸಭೆಯ ವಿಶ್ವ ಬ್ಯಾಂಕಿನಿಂದ ೨೮ ಕೋಟಿ ರೂಪಾಯಿಗಳನ್ನು ವಿವಿಧ ಅಭಿವೃದ್ಧಿ ಯೋಜನೆಗಳನ್ನು

ರೂಪಿಸಿ ಪೌರಾಡಳಿತ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಇದು ಯಾವ ಹಂತದಲ್ಲಿದೆ?

ಯೋಜನೆಗೆ ಸಾಲ ಮಂಜೂರಾತಿ ನೀಡುವ ಸಂಭವವಿದೆಯೇ?

ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ):- ಅಧ್ಯಕ್ಷರೇ, ನಗರ ಅಭಿವೃದ್ಧಿ ಯೋಜನೆಯಡಿ ವಿಶ್ವ ಬ್ಯಾಂಕ್‌ನಿಂದ ಧನಸಹಾಯ ಪಡೆಯುವ ಬಗ್ಗೆ ವಿಶ್ವ ಬ್ಯಾಂಕಿನ ಪ್ರತಿನಿಧಿಯಾಗಿ ಬಂದಿದ್ದ ಡಾ. ಶ್ರೀ ರಾಟನರ್ ಇವರೊಂದಿಗೆ ಚರ್ಚೆ ನಡೆಸಲಾಗಿತ್ತು. ಆದರೆ ಈ ವಿಷಯದಲ್ಲಿ ಯಾವುದೇ ಪ್ರಗತಿ ಇರುವುದಿಲ್ಲ. ದಾವಣಗೆರೆ ನಗರಸಭೆಯ ಅಭಿವೃದ್ಧಿ ಯೋಜನೆಗಳಿಗೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯುವ ಬಗ್ಗೆ ಯಾವುದೇ ಪ್ರಸ್ತಾಪನೆ ಈಗ ಸದ್ಯಕ್ಕೆ ಇರುವುದಿಲ್ಲ.

ಗುಲ್ಬರ್ಗ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿರುವ ಪಶುವೈದ್ಯಶಾಲೆಗಳಿಗೆ ಔಷಧಿಗಳನ್ನು ಒದಗಿಸುವ ಬಗ್ಗೆ

ಶ್ರೀ ಬಸವಂತರೆಡ್ಡಿ ಪೊತಕಪಲ್ಲಿ (ಸೇಡಂ):- ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿ ಸುಮಾರು ೧೮-೧೨ ಪಶುವೈದ್ಯ ಶಾಲೆಗಳು ಇದ್ದು ಈ ಪಶು ವೈದ್ಯಶಾಲೆಗಳಿಗೆ ಒಂದು ತಿಂಗಳಿಂದ ಸುಮಾರು ೭-೮ ದನಗಳಿಗೆ ಆಗುವಷ್ಟು ಮಾತ್ರ ಲಭ್ಯವಾಗುವಷ್ಟು ಔಷಧಿಗಳನ್ನು ಪೂರ್ಯಸುವುದು ನಿಜವಲ್ಲವೇ? ಕನಿಷ್ಟ ಒಂದೊಂದು ಪಶು ವೈದ್ಯ ಶಾಲೆಗಳಿಗೆ ತಿಂಗಳಿಗೆ ಸರಾಸರಿ ೨೦೦-೩೦೦ ಜಾನುವಾರುಗಳು ಚಿಕಿತ್ಸೆಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಈ ಪ್ರಕಾರ ಒಂದು ತಿಂಗಳಿಗೆ ೭-೮ ದನಗಳಿಗೆ ಲಭ್ಯವಾಗುವಷ್ಟು ಔಷಧಿಗಳನ್ನು ನೀಡಿದರೆ ರೈತರಿಗೆ ಇಂತಹ ಪಶುವೈದ್ಯಶಾಲೆಗಳು ಇದ್ದೂ ಸಹ ಇಲ್ಲದಂತೆ ಆಗುವುದಿಲ್ಲವೇ? ಇದರ ಬಗ್ಗೆ ಆ ರೈತರು ಅರ್ಜಿಯನ್ನು ತಮಗೆ ನೀಡಿರುವುದನ್ನು ವೀಕ್ಷಿಸಿದರೆ ಈ ಪಶುವೈದ್ಯಶಾಲೆಗಳ ಪರಿಸ್ಥಿತಿ ಏನು ಎಂಬುದು ತಮ್ಮ ಗಮನಕ್ಕೆ ಬರುವುದು. ಇದನ್ನು ವೀಕ್ಷಿಸಿ ಸೇಡಂ ಮತಕ್ಷೇತ್ರದ ಪಶುವೈದ್ಯ ಶಾಲೆಗಳಿಗೆ ಅಥವಾ ಜಿಲ್ಲೆಯಲ್ಲಿ ಇದೇ ಪರಿಸ್ಥಿತಿ ಇದ್ದರೆ ಎಲ್ಲಾ ಪಶುವೈದ್ಯ ಶಾಲೆಗಳಿಗೆ ವ್ಯವಸಾಯದ ಮೂಲ ಆಧಾರವಾದ ಜಾನುವಾರುಗಳ ಸಂಖ್ಯೆಯ ಆಧಾರದ ಮೇಲೆ ಔಷಧವನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಿ ರೈತರ ಜಾನುವಾರುಗಳನ್ನು ಕಾಪಾಡುವಿರೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಪಾಟೀಲ್ (ಪಶು ಸಂಗೋಪನ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಮಾತು ಸರ್ಕಾರದ ಗಮನಕ್ಕೆ ಬಂದಿದೆ. ಈ ವರ್ಷದಲ್ಲಿ ಔಷಧಗಳನ್ನು ಸರಬರಾಜು ಮಾಡುವಲ್ಲಿ ಸ್ವಲ್ಪ ತಡವಾಗಿದೆ. ಆದುದರಿಂದ ಈಗಾಗಲೇ ಇದರ ಬಗ್ಗೆ ಕ್ರಮತೆಗೆದುಕೊಂಡು ಆದಷ್ಟು ನಮ್ಮ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಔಷಧಗಳನ್ನು ಸರಬರಾಜು ಮಾಡಲಾಗಿದೆ. ಇನ್ನು ಮುಂದೆಯೂ ಕೂಡ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸಲಾಗುವುದು.

ಅಧ್ಯಕ್ಷರು:- ಔಷಧಿಯನ್ನು ಪೂರ್ಯಸುವುದರಲ್ಲಿ ತಡವಾಗಲು ಕಾರಣವೇನು?

ಶ್ರೀ ಬಸವರಾಜ ಪಾಟೀಲ್:- ಅಧ್ಯಕ್ಷರೇ, ಹಿಂದೆ ಇದ್ದಂಥ ಮಂತ್ರಿಗಳು ಒಂದು ಟೆಕ್ನಿಕಲ್